# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ನಂ. ಹುದಾಮಪಾ/ಹಹುಮಾಸಮೀಕ್ಷೆ/2018-19

ದಿನಾಂಕ: 14-02-2019

## ಸಾರ್ವಜನಿಕ ಪ್ರಕಟಣೆ

**ಹಳೇ-ಹುಬ್ಬಳ್ಳಿ ಮಾರುಕಟ್ಟೆ ಕಟ್ಟಡದಲ್ಲಿ 2ನೇ ಮಹಡಿಯಲ್ಲಿ ಲಭ್ಯವಾಗುವ 924 ಚ.ಮೀ, ಮೂರನೇ ಮಹಡಿಯಲ್ಲಿ 640 ಚ.ಮೀ ಸುಸಜ್ಜಿತ ಜಾಗೆಯಲ್ಲಿ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಬಾಡಿಗೆ ಆಧಾರದ ಮೇಲೆ ಪಡೆಯಲು ಅರ್ಹ ಅರ್ಜಿದಾರರಿಂದ ನೊಂದಾಯಿಸಲು ಬೇಡಿಕೆ ಸಮೀಕ್ಷೆ**

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಹಳೇ-ಹುಬ್ಬಳ್ಳಿಯ ತರಕಾರಿ ಮಾರುಕಟ್ಟೆಯನ್ನು ಮತ್ತು ವಲಯ ಕಚೇರಿ ಕಟ್ಟಡದ ಪ್ರದೇಶವನ್ನು ನೂತನ ವಿನ್ಯಾಸದೊಂದಿಗೆ ಅಭಿವೃದ್ದಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ವಲಯ ಕಚೇರಿಯ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ಕೆಳಮಹಡಿಯಲ್ಲಿ ವಾಹನ ನಿಲುಗಡೆ. ನೆಲ ಮಹಡಿಯಲ್ಲಿ ವ್ಯಾಪಾರ ಮಳಿಗೆ ಹಾಗೂ ಮೊದಲನೆ ಮಹಡಿಯಲ್ಲಿ ವಲಯ ಕಚೇರಿ ಮತ್ತು ಗ್ರಂಥಾಲಯ, ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ ಮತ್ತು ಮೂರನೆ ಮಹಡಿಯಲ್ಲಿ ತೆರೆದ ಮೇಲ್ಚಾವಣಿಯೊಂದಿಗೆ ಸ್ಥಳಾವಕಾಶ ಒದಗಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ.

ಪ್ರಸ್ತುತ ಎರಡನೇ ಮಹಡಿಯಲ್ಲಿ ಅಂದಾಜು 924 ಚ.ಮೀ ಸ್ಥಳಾವಾಕಾಶ, ಮೂರನೇ ಮಹಡಿಯಲ್ಲಿ 640 ಚ.ಮೀ ಸ್ಥಳಾವಕಾಶ ಸಾರ್ವಜನಿಕ ಸಂಘ-ಸಂಸ್ಥೆಗಳಿಗೆ ಭಾಡಿಗೆಯೊಂದಿಗೆ ಲಭ್ಯವಾಗುತ್ತದೆ. ಉದ್ದೇಶಿತ ಸ್ಥಳಾವಕಾಶದ ನಕ್ಷೆಯನ್ನು ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಸದರಿ ಸ್ಥಳದಲ್ಲಿ ಸಾರ್ವಜನಿಕರು ಸೂಕ್ತ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ, ಕಾರ್ಪೋರೆಟ್ ಸಂಸ್ಥೆ, ಬ್ಯಾಂಕುಗಳಿಗೆ ಮತ್ತು ಇತರ ವ್ಯಾಪಾರ ಕೈಗೊಳ್ಳಲು ಅನುಕೂಲವಾಗಿರುತ್ತದೆ. ಸದರಿ ಸ್ಥಳವನ್ನು ಸಾರ್ವಜನಿಕರ ಬೇಡಿಕೆ ಮತ್ತು ಚಟುವಟಿಕೆಗೆ ಅನುಸಾರ, ಪೌರಾಡಳಿತ ನಿರ್ದೇಶನಾಲಯದ ಮಾರುಕಟ್ಟೆಯ ನಿಯಮಾವಳಿಯಂತೆ ಸ್ಥಳಾವಕಾಶವನ್ನು ಹಂಚಿಕೆ ಮಾಡಿ ಬಾಡಿಗೆಯನ್ನು ಆಕರಿಸಿ ಒದಗಿಸಲಾಗುವುದು. ಕಾರಣ ಸಾರ್ವಜನಿಕರು ನಿಯೋಜಿತ ಕಟ್ಟಡದಲ್ಲಿ ಲಭ್ಯವಾಗುವ ಸ್ಥಳಕ್ಕೆ ಬೇಡಿಕೆ ಪತ್ರವನ್ನು ವಲಯ ಕಚೇರಿಗೆ ದಿ: 23-02-2019 ರ ಒಳಗಾಗಿ ಸಲ್ಲಿಸಲು ಕೋರಲಾಗಿದೆ. ಅರ್ಜಿ ನಮೂನೆಯನ್ನು ವಲಯ ಕಚೇರಿಯಿಂದ ಪಡೆಯಬಹುದು ಅಥವಾ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ವೆಬ್ ಸೈಟ್ hubballidharwadsmartcity.com ಮೂಲಕ ಪಡೆಯಬಹುದಾಗಿದೆ. ಸಾರ್ವಜನಿಕರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರಣಾ ಮಾಡಿ ಆಯುಕ್ತರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಇವರ ಹೆಸರಿನಲ್ಲಿ ರೂ. 500/- ಗಳ ಡಿಡಿಯೊಂದಿಗೆ ಅರ್ಜಿಯನ್ನು ಲಗತ್ತಿಸಿ ದಿ: 23-02-2019 ರ ಒಳಗಾಗಿ ಸಲ್ಲಿಸಲು ಕೋರಲಾಗಿದೆ.

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ